



# ಕೋಮಲ ಕೈಗೆ ಕಲೆಯ ಕುಸುರಿ

■ ಸಂಧ್ಯಾ ಹೆಗಡೆ

ಫ್ಯಾಷನ್ ಲೋಕದಲ್ಲಿ ಸದ್ಯ ಯುವತಿಯರ ಕಲ್ಪನಾ ವಿಲಾಸಕ್ಕೆ ರೆಕ್ಕೆ ಕಟ್ಟಿದ್ದು 'ನೇಲ್ ಆರ್ಟ್'. ಕೋಮಲವಾದ ಬೆರಳ ತುದಿಯ ಚೂಪಾದ ಉಗುರಿನಲ್ಲಿ ಮೈದಳೆದ ಸೂಕ್ಷ್ಮ ಕುಸುರಿಯ ಚಿತ್ತಾರಗಳು, ನಿಧಾನಕ್ಕೆ ಆ ಕೈಬೆರಳುಗಳು ಕೆನ್ನೆಯ ಮೇಲೆ ಸರಿದಾಡುತ್ತಿದ್ದರೆ ನೋಡುಗನ ನಯನದಲ್ಲಿ ಮಿಂಚು ಹರಿಯದೇ ಇರದು.

ಸಿನಿಮಾ ತಾರೆಯರು, ಮಾಡೆಲಿಂಗ್‌ಗಳು, ಸೆಲೆಬ್ರಿಟಿಗಳಿಗೆ ಸೀಮಿತವಾಗಿದ್ದ ನಖದ ಕಲಾತ್ಮಕ ಕಲೆ ಈಗ ನಮ್ಮ ಮನೆಯ ಮಗಳ ಕೈಯಲ್ಲೂ ಮಿನುಗುತ್ತಿದೆ. ಫ್ಯಾಷನ್‌ಪ್ರಿಯರನ್ನು ಸೂಜಿಗಲ್ಲಿನಂತೆ ಸೆಳೆದಿರುವ 'ಉಗುರಿನ ರಂಗೋಲಿ'ಯಲ್ಲಿ ಈಗ ಟ್ರೆಂಡಿಂಗ್‌ನಲ್ಲಿರುವುದು ಎಲ್ಲ ರೀತಿಯ ಔಟ್‌ಫಿಟ್‌ಗಳಿಗೆ ಹೊಂದಿಕೆಯಾಗುವ ಓವಲ್, ಆಲ್ಮಂಡ್ ಆಕೃತಿಯ ಉಗುರುಗಳ ಮೇಲೆ ತಿಳಿ ಬಣ್ಣದ ಸಿಂಪಲ್ ಪಾಲಿಷ್.

ಸ್ಕೋವಲ್, ಸ್ಕ್ವೇರ್, ರೌಂಡ್, ಸ್ಟಿಲೆಟ್ಟೊ, ಕೊಫಿನ್ ಆಕೃತಿಗಳು ನಖವನ್ನು ಆಲಂಗಿಸುತ್ತವೆ. ವಿಶೇಷ ಸಮಾರಂಭಗಳಲ್ಲಿ ಫ್ರೆಂಚ್ ಟಿಪ್ಸ್, ಮ್ಯಾಗ್ನೆಟಿಕ್ ಫಿನಿಷ್, ಹೊಳೆಯುವ ಹೂಗಳು, ಹಣ್ಣುಗಳು, ಹಾರುವ ಚಿಟ್ಟೆಗಳು, ಮೋಡದ ನಾಡಿನ ಕಾಮನಬಿಲ್ಲು, ಮುತ್ತಿನ ಹನಿಗಳು, ಮೆಟಲ್‌ಗಳು, ಮಿಡಿಯುವ ಹೃದಯ, ಮಿರುಗುವ ನಕ್ಷತ್ರಗಳು ಹೀಗೆ ಮನದ ಅಮೂರ್ತಗಳು ಉಗುರಿನ ಮೇಲೆ ಮೂರ್ತವಾಗಿ ಅರಳುತ್ತಿವೆ.

ಪ್ರೀ ವೆಡ್ಡಿಂಗ್ ಶೂಟಿಂಗ್, ಹಳದಿ, ಮೆಹಂದಿ ಶಾಸ್ತ್ರ, ಮದುವೆ, ರಿಸೆಪ್ಶನ್, ಪಾರ್ಟಿಗಳಲ್ಲಿ ಹೆಚ್ಚು ಕಣ್ಸೆಳೆಯುತ್ತಿದ್ದ ನೇಲ್ ಆರ್ಟ್‌ಗಳು ಈಗ ದೈನಂದಿನ ಜೀವನದ ಭಾಗವಾಗಿವೆ. ಈ ಕಾಲದ ಯುವ ಮನಸ್ಸುಗಳಿಗೆ ನೇಲ್ ಆರ್ಟ್ ಅನ್ನುವುದು ಅವರ ಮೂಡ್ ಅನ್ನು ಪ್ರತಿಬಿಂಬಿಸುವ ಮಾಧ್ಯಮವಾಗಿದೆ.

ಐದು ಬೆರಳುಗಳಿಗೆ ಒಂದೇ ಬಗೆಯ ಚಿತ್ತಾರ ಸೃಷ್ಟಿಸುವ ಫ್ಯಾಷನ್ ಈಗ ಬದಲಾಗಿದೆ. ಬೆಸೆದುಕೊಂಡಿರುವ ಐದು ಬೆರಳುಗಳಲ್ಲಿ ಒಂದೊಂದು ಬೆರಳಿಗೆ ಒಂದೊಂದು

